# 2 ನೇ ಹೆಚ್ಚುವರಿ ಪ್ರಥಮ ದರ್ಜೆಯ  ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು.

**ಓ ಎಸ್ ನಂ.101-2012** **ಡಿ. ಡಬ್ಲುಃ 1**

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ಹುಚ್ಚಯ್ಯ<br>ನಂಜನಗೂಡು |
| | **ಸತ್ಯ ಪ್ರತಿಜ್ಞೆಯ** ಮೇರೆಗೆ **ದಿನಾಂಕ** 25-05-2023. |

**<u>ಮುಂದುವರೆದ ಪಾಟೀ ಸವಾಲುಃ  ಶ್ರೀ ಕೆ.ಎಸ್.ಕೆ   ವಕೀಲರಿಂದಃ</u>**

ನಾನು ಹೇಳುವಂತೆ ದಾವಾ 7 ನೇ ಐಟಂ ಸ್ವತ್ತನ್ನು ಹೊರುತಪಡಿಸಿ ಉಳಿದೆಲ್ಲಾ ಸ್ವತ್ತುಗಳು ದಿ.23-08-1986 ರ ಪಂಚಾಯ್ತಿ ಪಾರಿಕತ್ತಿನ ಮುಖೇನ ವಿಭಾಗ ಆಗಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ವಿಭಾಗದಂತೆ 4 ಮತ್ತು 5 ನೇ ಪ್ರತಿವಾದಿಗಳು ಅಪ್ರಾಪ್ತವಯಸ್ಕರಾದ ಕಾರಣ ನನ್ನ ತಾಯಿ ಮಾಲಮ್ಮ ಅವರುಗಳನ್ನು ತನ್ನ ವಶಕ್ಕೆ ಪಡೆದು ಆಸ್ತಿಗಳನ್ನು ಪಾಲನೆ ಪೋಷಣೆ ಮಾಡುತ್ತಾರ ಬಂದಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ತಂದೆ-ತಾಯಿ ಹಾಗೂ ನನ್ನ ಸಹೋದರ ಸಹೋದರಿಯವರು ಒಟ್ಟು ಕುಟುಂಬದಲ್ಲಿ ವಾಸವಾಗಿದ್ದೆವು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ವಿವಾಹದ ನಂತರ ನಾನು ಬೇರೆ ವಾಸವಾಗಿದ್ದು ವಿಭಾಗದ ಪತ್ರ ಮಾಡಿದ್ದು ನನ್ನನ್ನು ಹೊರತುಪಡಿಸಿ ಉಳಿದ ನನ್ನ ಸಹೋದರ-ಸಹೋದರಿಯರು ಒಟ್ಟು ಕುಟುಂಬದಲ್ಲಿ ವಾಸವಿದ್ದರು ಎಂದು ನುಡಿಯುತ್ತಾರೆ. ನನ್ನ ತಂದೆ-ತಾಯಿಯರ ಅಜ್ಜುಪಾಲಿಗೆ ಬಂದ ಸ್ವತ್ತುಗಳನ್ನು ಯಾವಾಗ ವಿಭಾಗ ಮಾಡಿಕೊಂಡಿರುತ್ತೇವೆ ಎಂದು ನನಗೆ ನೆನಪಿರುವುದಿಲ್ಲ. ನನ್ನ ತಂದೆ-ತಾಯಿಯವರ ಮರಣಾ ನಂತರ ಅವರ ಭಾಗಕ್ಕೆ ಬಂದಂತಹ ಅಜ್ಜುಪಾಲಿನ ಸ್ವತ್ತನ್ನು ವಿಭಾಗ ಮಾಡಿಕೊಂಡಿರುತ್ತೇವೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳುವಂತೆ ಯಾವುದೇ ವಿಭಾಗವಾಗದೇ ಇದ್ದರೂ ಸಹ ರವೆನ್ಯೂ ಅಧಿಕಾರಿಗಳೊಂದಿಗೆ ಶಾಮೀಲಾಗಿ ಖಾತಾ ಬದಲಾವಣೆ ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. 5 ನೇ ಪ್ರತಿವಾದಿ ತನ್ನ ಭಾಗಕ್ಕೆ ಬಂದಂತಹ 1 ನೇ ಐಟಂ ನಲ್ಲಿ 2 ಗುಂಟೆ, 3 ನೇ ಐಟಂನಲ್ಲಿ 8 1/3 ಗುಂಟೆ, 6 ನೇ ಐಟಂ ನಲ್ಲಿ 0.11 ಗುಂಟೆ, 10 ನೇ ಐಟಂನಲ್ಲಿ 10 ಗುಂಟೆ, 5 ನೇ ಐಟಂನಲ್ಲಿ ಒಂದು ಭಾಗ, ಐಟಂ ನಂ.2 ರಲ್ಲಿ 0.19

ಗುಂಟೆ, ಸರ್ವೆ ನಂ.255 ರಲ್ಲಿ ಆತನ ಭಾಗಕ್ಕೆ ಬಂದಂತಹ ಜಮೀನನ್ನು ಸಾಯಿಲಕ್ಷ್ಮೀ ಪ್ಯಾಕ್ಟರಿಗೆ ಮಾರಾಟ ಮಾಡಿರುತ್ತಾರೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

2. 3 ನೇ ಪ್ರತಿವಾದಿಯ ಗಂಡ ಆತನ ಭಾಗಕ್ಕೆ ಬಂದ ಐಟಂ ನಂ.4,5,8 ಮತ್ತು 10 ಆಸ್ತಿಗಳನ್ನು ಸಂದೇಶ್‌ಸ್ವಾಮಿ ರವರಿಗೆ ಮಾರಾಟ ಮಾಡಿರುತ್ತಾರೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅದಕ್ಕೆ ಸಂಬಂಧಿಸಿದ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ನಿಡಿ–31 ಅನ್ನು ನಾನು ಈ ಪ್ರಕರಣಕ್ಕಾಗಿ ಸೃಷ್ಟಿ ಮಾಡಿದ್ದು ಸದರಿ ದಾಖಲೆಯಲ್ಲಿ ಒಟ್ಟು ಕುಟುಂಬದ ಸದಸ್ಯರ ಸಹಿ ಇರುವುದಿಲ್ಲ ಎಂದರೆ ಸರಿಯಲ್ಲ. ನಿಡಿ–31 ರಲ್ಲಿ ಒಟ್ಟು ಕುಟುಂಬಕ್ಕೆ ಸೇರಿದ ಎಲ್ಲಾ ಆಸ್ತಿಗಳು ನಮೂದು ಆಗಿರುತ್ತದೆ. ನಿಡಿ–31 ರಲ್ಲಿ ನನಗೆ ಬೇಕದಾ ಸ್ವತ್ತುಗಳನ್ನು ಮಾತ್ರ ನಮೂದು ಮಾಡಲಾಗಿರುತ್ತದೆ ಎಂದರೆ ಸರಿಯಲ್ಲ. ನಿಡಿ–31 ಸೃಷ್ಟಿತ ದಾಖಲಾತಿ ಎಂದರೆ ಸರಿಯಲ್ಲ. ನಿಡಿ–31 ರ ಆಧಾರದ ಮೇರೆಗೆ ಯಾವುದೇ ರೆವೆನ್ಯೂ ದಾಖಲೆಗಳು ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಿಡಿ–32 ರಿಂದ 36 ರವರೆಗಿನ ದಾಖಲೆಗಳು ಸೃಷ್ಟಿತ ದಾಖಲೆಗಳು ಎಂದರೆ ಸರಿಯಲ್ಲ. ನಮ್ಮ ಕುಟುಂಬದಲ್ಲಿ ಯಾವುದೇ ವಿಭಾಗ ಆಗದೇ ಇದ್ದರೂ ಸಹ ವಿಭಾಗ ಆಗಿದೆ ಎಂದು ಸುಳ್ಳು ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/–**

**ಕಿ.ಪ್ರ.ದ. ನ್ಯಾ ದಂ. ನಂಜನಗೂಡು**